● ಆಗ ನೀವು ಮಾತನಾಡುತ್ತ 'ಕೆಂಡಸಂಪಿಗೆ' ಬೇರೆ, 'ಜಾಕಿ' ಸಿನಿಮಾ ಬೇರೆ ಅಂತ ಹೇಳಿದ್ರಿ. ನಿಜವಾಗ್ಲೂ ಅವು ಬೇರೆ ಬೇರೆಯೇ?

ಕಳೆದ ಒಂಬತ್ತು ಸಿನಿಮಾಗಳಲ್ಲಿ ನನ್ನದು ಅಂತ ಒಂದು ಸ್ಟೈಲ್ ರೂಪುಗೊಂಡಿದೆ. ತೆರೆಮೇಲೆ ಬರುವ ಸಿನಿಮಾ ನೋಡಿ 'ಈ ಸೂರಿ ಗೊತ್ತು ನಂಗೆ' ಅಂತ ಹೇಳೋ ಜನ ಇದಾರಲ್ವಾ. ಗೊತ್ತು ಅಂದ್ರೆ ಹೇಗೆ ಗೊತ್ತು? ನನ್ನ ಆಸ್ತಿ, ನನ್ನ ಹಿನ್ನೆಲೆ ಅಥವಾ ಯಾವ್ದೇ ಎಜುಕೇಷನ್, ಹಾಳುಮೂಳು ಅಲ್ಲ ಗೊತ್ತಿರೋದು. ನನ್ನ ಕೆಲಸ ಮಾತ್ರ ಗೊತ್ತಿರತ್ತೆ ಅವರಿಗೆ. ಅದೇ ರೀತಿ ಪುನೀತ್ ರಾಜ್‌ಕುಮಾರ್ ಅವರೂ ಪ್ರೇಕ್ಷಕರಿಗೆ ಒಂದು ಬಗೆಯಲ್ಲಿ ಪರಿಚಯ ಆಗಿದ್ದಾರೆ. ನಾವಿಬ್ರೂ ಸೇರಿ ಏನು ಮಾಡ್ತೀವಿ ಎನ್ನುವ ಕ್ಲಾರಿಟಿ ಇರಬೇಕು. ಅವ್ರನ್ನು ತಗೊಂಡುಬಂದು, ನನ್ನ ಕನಸು ಅಂತ್ಹೇಳಿ ಅವರ ಇಮೇಜಿಗೆ ಸಂಬಂಧವೇ ಇಲ್ದೆ ಇರೋದಕ್ಕೆ ಮ್ಯಾಚ್ ಮಾಡೋದಿದ್ಯಲ್ಲಾ, ಅದು ತಪ್ಪು. ಈಗ ಆಗ್ತಿದರೋದೇ ಅದು. ಸಾರಿ... ಕನ್ನು ಗಿನ್ನು ಎಲ್ಲಾ ಮಾರುಕಟ್ಟೇಲಿ ನಡ್ಯಲ್ಲ. ನಿಮ್ಮ ಯಾವ ಪ್ರಶಸ್ತಿಯನ್ನೂ ನಾನು ಯಾವ್ದೇ ಹೋಟೆಲ್‌ಗೆ ಹೋದ್ರೆ ತಗೊಳ್ಳಲ್ಲ. ಮತ್ತೆ ಅಲ್ಲಿಗೇ ಬರ್ತಿದೀನಿ. ಎಲ್ಲರಿಗೂ ಬದುಕೋಕೆ ದುಡ್ಡು ಬೇಕು. ನನಗೆ ಗೊತ್ತಿದೆ ನನ್ನ ಬದುಕಿಗೆ ಎಷ್ಟು ದುಡ್ಡು ಬೇಕು ಅಂತ. ನನಗೊಂದಿನ ಇದರಿಂದ ಫುಡ್ ಬೇಡ ಅನ್ನಿಸಿದ್ರೆ ಕ್ಯಾನ್ಸಲ್ ಮಾಡ್ತೀನಿ. ಚಿತ್ರಕಲೆಯಲ್ಲಿ ನನಗೆ ಬೇಕಾದಷ್ಟು ದುಡ್ಡು ಸಿಗುತ್ತೆ ಅಂದ್ರೆ ಸಿನಿಮಾ ಬಿಟ್ಟು ಅಲ್ಲಿಗೇ ಹೋಗ್ತೀನಿ.

ನನ್ನ ನೋಡಿ ಸುಮಾರು ಜನ 'ವೋ, ಇವ್ನು ವೆರಿ ಲಕ್ಕಿ' ಅಂದ್ಕೋತಾರೆ. ಅಲ್ವೇ ಅಲ್ಲ. ನಾನು ಲಕ್ಕಿ ಎನ್ನೋದೆಲ್ಲ ಸುಳ್ಳು. ನಿರಂತರವಾಗಿ ಕೆಲಸ ಮಾಡ್ತಾ ಹೋಗು ಏನು ಬೇಕಾದ್ರೂ ಆಗುತ್ತೆ ಅನ್ನೋದು ನನ್ನ ನಂಬಿಕೆ.

● ಚಿತ್ರಕಲೆಯಿಂದ ನೀವು ಸಿನಿಮಾಗೆ ಬಂದ ಸಂದರ್ಭ ಯಾವುದು?

ಐದು ವರ್ಷ ಚಿತ್ರಕಲೆ ಅಭ್ಯಾಸ ಮಾಡಿದ ನಂತರ, ಚೆನ್ನೈಗೆ ಹೊರಟೆ. ಅಲ್ಲಿ ಎರಡು ವರ್ಷ ಇದ್ದೆ. ಅಲ್ಲಿ 'ಕಲರಿಸಂ' ಅಂತ ಒಂದು ತಂಡ ಶುರುಮಾಡಿದೆವು. ನಾನು ನನ್ನ ಸ್ನೇಹಿತರಾದ ಡೇವಿಡ್ ಮತ್ತು ಫೈಸಲ್ ಮೂವರೂ ಸೇರಿ ಶುರು ಮಾಡಿದ ತಂಡ ಅದು. ಶಾಪರ್‌ಸ್ಟಾಪ್, ನೈಕಿ, ರೆಮೆಂಡ್ ಕಂಪನಿಗಳಿಗೆಲ್ಲ ವಿಂಡೊ ಡಿಸ್‌ಪ್ಲೇ ಮಾಡುತ್ತಿದ್ದೆವು. ಅವತ್ತಿಗೆ ಹದಿನೈದು ಲಕ್ಷದಿಂದ ಇಪ್ಪತ್ತು ಲಕ್ಷದವರೆಗೆ ವ್ಯವಹಾರ ಇತ್ತು ನಮ್ಮ ಕಂಪನಿಗೆ. ನಾವೇ ನಷ್ಟ ಮಾಡ್ಕೊಂಡ್ವಿ. ವಯಸ್ಸು ಅಂಥದ್ದು. ಶೋಕಿಗೆ ಬಿದ್ವಿ. ಸಿಕ್ಕಾಪಟ್ಟೆ ಸಿನಿಮಾ ಹುಚ್ಚು. ಸಿನಿಮಾಗೆ ಬರಬೇಕು ಅಂತಿರ್ಲಿಲ್ಲ. ಆದ್ರೆ ತುಂಬ ಸಿನಿಮಾಗಳನ್ನು ನೋಡ್ತಿದ್ವಿ. ಬಾಯಿಗೆ ಬಂದಂಗೆ ಬೈತಿದ್ವಿ. ಎಲ್ಲ ಸಿನಿಮಾಗಳಿಗೂ ಬೈತಿದ್ವಿ. 'ಇವರಿಗೆ ಏನೂ ಮಾಡೋಕೆ ಬರಲ್ಲ, ನಮಗೆ ಬರತ್ತೆ' ಅಂತ.

ಚೆನ್ನೈ ಸಾಕು ಅನ್ನಿಸಿ ಬೆಂಗಳೂರಿಗೆ ಬಂದ ಮೇಲೆ ನನಗೆ ತುಂಬ ಈಸಿ ಆಗೋಯ್ತು. ಸುಮ್ನೇ ಏನ್ಮಾಡ್ತಾರೆ ಅಂತ ಕುತೂಹಲಕ್ಕೆ ಸೀರಿಯಲ್ ಜಗತ್ತಿಗೆ ನುಗ್ಗಿದೆ. 'ಸಾಧನಾ' ಧಾರಾವಾಹಿಗೆ ಕಲಾ ನಿರ್ದೇಶಕನಾಗಿ ಸೇರಿಕೊಂಡಾಗ ನನಗೆ ಐದು ಸಾವಿರ ಸಂಬಳ. ಮುನ್ನೂರೈವತ್ತು ನಾನ್ನೂರು ಎಪಿಸೋಡು ಕೆಲಸ ಮಾಡಿದೆ. ಅದಕ್ಕೆ ಬಿ. ಸುರೇಶ್ ನಿರ್ದೇಶಕರು. ನನಗೆ ಯೋಗರಾಜ್ ಭಟ್, ಸಕ್ರೆಬೈಲ್ ಶ್ರೀನಿವಾಸ ಅವರೆಲ್ಲ ಪರಿಚಯ ಆಗಿದ್ದು ಅಲ್ಲಿಯೇ. ಯೋಗರಾಜ್ ಭಟ್ ಅವರು ಎಪಿಸೋಡು ಡೈರೆಕ್ಟರ್ ಆಗಿದ್ರು. ಆಗ ನನಗೆ ಆರ್ಟ್ ಡಿಪಾರ್ಟ್‌ಮೆಂಟ್ ಜತೆಗೆ ನಿರ್ದೇಶನದ ಮೇಲ್ವಿಚಾರಣೆಯ ಜವಾಬ್ದಾರಿಯನ್ನೂ ಕೊಡೋರು. ಅಲ್ಲಿ ನನಗೆ ಬೇಕಾದ್ದನ್ನು ಬೇಗ ಕಲಿತುಕೊಂಡು ಬರಿಯೋಕೆ ಶುರುಮಾಡಿದೆ. ಯೋಗರಾಜ್